ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 22.

ಬೆಂಗಳೂರು, ಗುರುವಾರ, ಜೂನ್ ತಾ॥ 3, ಸನ್ 1909.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀವರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಡಿಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಲೆಕ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರಜಿಸ್ಟ್ರೇರ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟು ಡಿಪ್ಯೂಟಿ ಕಮ್ಮಿಷನರುಗಳು, ಸಬ್ಡಿವಿಜನ್ ಜಡ್ಜ್‌ರು, ಪೊಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್‌ಮಾಸ್ಟರ್ ನೋಟೀಸುಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು

1ನೆ ಭಾಗ.

ಮೈಸೂರು ಸೀಮೆಯ ಶ್ರೀವರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ಇಸ್ತಿಹಾರ್ನಾಮೆ.

ತಾರೀಖು 31ನೆ ಮೇ 1909ನೆ ಇಸವಿ.

ನಂ. ರೆ. 10113—ವ್ಯವಸಾಯ 175-08-15.

1908-09ನೆ ಕೀಲಕ ಸಾಲಿನ ಜಮಾನು ಕಂದಾಯವೆನ್ನು ರಿಮಿಷ್ಟ್ ಮಾಡತಕ್ಕ ಮತ್ತು ವಸೂಲಾತಿಯನ್ನು ಕೆಲವುಕಾಲ ನಿಲ್ಲಿಸತಕ್ಕ ವಿಷಯದಲ್ಲಿ ಪುನರ್ವಿಮರ್ಶೆ ಮಾಡಿ ಸಾದರ್ಹಾಡಿರುವ ಇದರಡಿ ಕಂಡ 1909ನೆ ಇಸವಿ ಮೇ 30ನೆ ಮೆರ್ಕುಂನ ಕ್ಯಾಂಪು 20-30ನೆ ನಂಬರ್ ಸರ್ಕಾರಿ ಹುಕುಮನ್ನು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಘಾಯಿಷ್ಮಾಡಿ ಇರುತ್ತದೆ.

ಹುಕುಂ ಖುಮೋಜೀಬ್,

ಕೆ. ಎಸ್. ಚಂದ್ರಶೇಖರ ಅಯ್ಯರ್,

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ.

ಮೈಸೂರು ಶ್ರೀವರ್ ಮಹಾರಾಜಾ ಸಾಹೇಬ್ರ ಹದರವರ ಸರ್ಕಾರಿ ಹುಕ್ಕುಂ.

1908-09ನೆ ಕೀಲಕ ಸಂವತ್ಸರದ ಜಮಾನು ಕಂದಾಯದ ಬಾಕಿಯನ್ನು ರಿಮಿಷ್ಟ್ ಕೊಡತಕ್ಕ ವಿಷಯದಲ್ಲಿಯೂ ಅದನ್ನು ಕೆಲವು ಕಾಲದವರೆಗೆ ವಸೂಲ್ಮಾಡದೆ ನಿಲ್ಲಿಸತಕ್ಕ ವಿಷಯದಲ್ಲಿಯೂ ಹೆಚ್ಚು ರಿಯಾಯಿತಿಗಳನ್ನು ತೋರಿಸತಕ್ಕ ವಿಷಯದಲ್ಲಿ ಮೈಸೂರು ಶೀಮೆಯ ರೆವಿನ್ಯೂ ಕಮಿಷನರವರು ಬರೆಸಿದ 1909ನೆ ಇಸವಿ ಏಪ್ರಿಲ್ 14ನೆ ತಾರೀಖಿನ ಡಿವೋ ಲೇಖನವನ್ನು ಪರಾಂಬರಿಸಲಾಯಿತು.

2: ಇದೇ ವಿಷಯವಾಗಿ ಸಾದರಾದ ಇದರಡಿ ಕಂಡ ಸರ್ಕಾರಿ ಹುಕ್ಕುಂಗಳನ್ನು ಸಹಾ ಪುನಹಾ ಓದಲಾಯಿತು :—

(*a*) 1909ನೆ ಇಸವಿ ಜನವರಿ 4ನೆ ಮೆಳ್ಳುಂನ 4332ನೆ ನಂಬರ್ ಹುಕ್ಕುಂ.

(*b*) 1909ನೆ ಮೊರ್ಚಿ 3ನೆ ಮೆರ್ಕುಂನ 6859ನೆ ನಂಬರ್ ಹುಕ್ಕುಂ.

(*c*) 1909ನೆ ಮೊರ್ಚಿ 20ನೆ ಮೆರ್ಕುಂನ 7506ನೆ ನಂಬರ್ ಹುಕ್ಕುಂ.

(*d*) 1909ನೆ ಏಪ್ರಿಲ್ 7ನೆ ಮೆರ್ಕುಂನ 8156ನೆ ನಂಬರ್ ಹುಕ್ಕುಂ.

(*e*) 1909ನೆ ಮೇ 1ನೆ ಮೆರ್ಕುಂನ 9058ನೆ ನಂಬರ್ ಹುಕ್ಕುಂ.

ಕ್ಯಾಂಪು ನಂಬರ್ 20–30, ಮೊಕ್ಕಾಂ ಮೈಸೂರು.

ತಾರೀಖು 30ನೆ ಮೇ 1909ನೆ ಇಸವಿ.

1908–09ನೆ ಕೀಲಕ ಸಂವತ್ಸರದಲ್ಲಿ ಕಾಲಸ್ಥಿತಿ ಸುಭಿಕ್ಷವಾಗಿಲ್ಲದರಿಂದ, ಆ ಸಾಲಿನ ಜಮೀನು ಕಂದಾಯವನ್ನು ರಿಮಿಾರ್ಷ್ ಯಾ ಮುಜರೆ ಕೊಡತಕ್ಕ ಮತ್ತು ಅದನ್ನು ವಸೂಲ್ಮಾಡದೆ ಕೆಲವುಕಾಲ ನಿಲ್ಲಿಸತಕ್ಕ ವಿಷಯದಲ್ಲಿ, ಸಮ್ಮಂಧಪಟ್ಟ ಸಮಸ್ತಜನಗಳ ತಿಳುವಳಿಕೆ ಮತ್ತು ನಡವಳಿಕೆ ಬಗ್ಗೆ ಇದರಡಿ ಕಂಡ ಅನುಜ್ಞೆಗಳನ್ನು ಮೇಲೆ ನಮೂದಾಗುವ ಸರ್ಕಾರಿ ಹುಕ್ಕುಂಗಳಲ್ಲಿ ಕಂಡವುಗಳಿಗೆ ಬದಲಾಗಿ ಸಾದರ್ಮಾಡೋಣಾಗಿರುತ್ತೆ :—

1. ತರೀ ಜಮೀನಾಗಿ ವಿಂಗಡಿಸಲ್ಪಟ್ಟ ಜಮೀನುಗಳ ಕಂದಾಯ.—ನೀರಿನ ಆಸರೆ ಯಾವ ಮೂಲಕವಾಗಿಯಾದರೂ ಇರಲಿ, ತರಿಯಾಗಿ ವಿಂಗಡಿಸಲ್ಪಟ್ಟ ಜಮೀನುಗಳಲ್ಲಿ 1908–09ನೆ ಕೀಲಕ ಸಾಲಿನಲ್ಲಿ ತರೀ ಫಸಲು ಶುದ್ಧಾಂಗವಾಗಿ ಆಗದೆ ಇದ್ದರೂ ಅಥವಾ ಸಾಧಾರಣ ಸಾಲಿನ ಫಸಲಿನಲ್ಲಿ ಶೇಕಡಾ 25ರ ಭಾಗಕ್ಕೆ ಮಿಾರದಷ್ಟು ಫಸಲು (ಅಂದರೆ ಸಾಧಾರಣ 16 ಆಣೆ ಬೆಳೆ ಪೈಕಿ 4 ಆಣೆಗೆ ಮಿಾರದಷ್ಟು ಫಸಲು) ಆಗಿದ್ದರೂ ಸರಿಯೆ, ಅರ್ಧ ಕಂದಾಯವನ್ನು ರಿಮಿಾರ್ಷ್ ಯಾ ಮುಜರೆ ಕೊಟ್ಟು ಬಾಕೀ ಅರ್ಧ ಕಂದಾಯವನ್ನು ವಸೂಲ್ಮಾಡತಕ್ಕದ್ದು.

2. ಫಸಲು ಶುದ್ಧಾಂಗವಾಗಿ ಆಗದೆ ಇರುವ ಜಮೀನುಗಳಿಗೆ ಮುಜರೆ ಕೊಡುವೆಂತೆ ಅದೇ ಪ್ರದೇಶದಲ್ಲಿರುವ ಹಿಡುವಳಿ ಬಂಜರು ಜಮೀನಿಗೂ ಅದೇ ದರದ ರಿಮಿಾರ್ಷ್ ಕೊಡಬೇಕು. ಆದರೆ "ಮೂಮೂಲು ಬಂಜರು" ಜಮೀನುಗಳಿಗೆ ಅಂದರೆ, ಕ್ರಮವಾಗಿ ಸಾಧಾರಣ ಸಾಲಿನಲ್ಲಿ ಬೆಳೆ ಇಡಲ್ಪಡದ ಹಿಡುವಳಿಯ ಜಮೀನಾಗಿದ್ದು ಈ ವರ್ಷವೂ ಸಾಧಾರಣ ಬೆಳೆಯಾಗಿದ್ದ ಪಕ್ಷದಲ್ಲಿ ಅಂಥಾ ಜಮೀನು ಬಂಜರಾಗಿಯೇ ಇರುತ್ತಿತ್ತೆಂದು ಊಹಿಸಬಹುದಾದ ಜಮೀನುಗಳಿಗೆ ರಿಮಿಾರ್ಷ್ ಕೊಡತಕ್ಕದ್ದಲ್ಲ.

3. ತರಿಯಾಗಿ ವಿಂಗಡಿಸಲ್ಪಟ್ಟ ಜಮೀನಿನಲ್ಲಿ ಸರ್ಕಾರಿ ನೀರಿನ ಆಸರೆಯಿಂದ ಅಥವಾ ಅಂಥಾ ಆಸರೆ ಇಲ್ಲದೆ ಖುಷ್ಕಿ ಫಸಲನ್ನು ಬೆಳೆದಿದ್ದರೆ, 1ನೆ ಪ್ಯಾರಾದಲ್ಲಿ ಕಂಡ ರಿಯಾಯಿತಿಯನ್ನು ಇದಕ್ಕೂ ತೋರಿಸಬೇಕು, ಆದರೆ ಅಂಥಾ ಗ್ರಾಮದಲ್ಲಿ ವಸೂಲಾಗುತ್ತಿರುವ ಖುಷ್ಕಿ ಕಂದಾಯದ ಸರಾಸರಿ ದರವನ್ನೂ ಸಹಾ ಖುಷ್ಕಿ ಬೆಳೆ ಬೆಳೆದ ಸದರಿ ಜಮೀನಿನಮೇಲೆ ವಸೂಲ್ಮಾಡಬೇಕು. ಈ ಜಮೀನುಗಳನ್ನು ಅಳತೆ ಮಾಡಬೇಕಾದ್ದಿಲ್ಲ, ಆದರೆ ಒಂದು ಪೂರಾ ಸರ್ವೆ ನಂಬರನ್ನಾಗಲಿ ಅಥವಾ ಒಂದು ಸರ್ವೆ ನಂಬರಿನ, ಒಂದು ಪ್ರತ್ಯೇಕ ಭಾಗವನ್ನಾಗಲಿ, ಪೂರ್ತಿ ಇದ್ದಂತೆ ಭಾವಿಸತಕ್ಕದ್ದು. ಖುಷ್ಕಿ ಬೆಳೆಯು ಶುದ್ಧಾಂಗವಾಗಿ ಆಗದಿದ್ದರೆ ಅಂಥಾ ಖುಷ್ಕಿ ಬೆಳೆಗಾಗಿ ಹೆಚ್ಚು ತೆರಿಗೆಯನ್ನು ವಸೂಲ್ಮಾಡತಕ್ಕದ್ದಿಲ್ಲವು.

4. ಖುಷ್ಕಿಯಾಗಿ ವಿಂಗಡಿಸಲ್ಪಟ್ಟ ಜಮೀನುಗಳ ಕಂದಾಯ.—ಖುಷ್ಕಿಯಾಗಿ ವಿಂಗಡಿಸಲ್ಪಟ್ಟ ಜಮೀನುಗಳಲ್ಲಿ ಖುಷ್ಕಿ ಬೆಳೆ ಶುದ್ಧಾಂಗವಾಗಿ ಆಗದಿದ್ದರೂ ಅಥವಾ ಆದ ಬೆಳೆ ಸಾಧಾರಣ ಸಾಲಿನ ಬೆಳೆಯಲ್ಲಿ ಶೇಕಡಾ 25 ರಷ್ಟಕ್ಕೆ ಮಿಾರದಂತೆ ಆಗಿದ್ದರೂ (ಅಂದರೆ ಸಾಧಾರಣ 16 ಆಣೆ ಪೈಕಿ 4 ಆಣೆಗೆ ಮಿಾರದಂತೆ ಬೆಳೆ ಆಗಿದ್ದರೂ) ಅರ್ಧ ಕಂದಾಯವನ್ನು ನಿಲ್ಲಿಸಿಬಿಟ್ಟು ಬಾಕಿ ಅರ್ಧವನ್ನು ವಸೂಲ್ಮಾಡಬೇಕು.

5. ಖುಷ್ಕಿ ಜಮೀನಾಗಿ ವಿಂಗಡಿಸಲ್ಪಟ್ಟು ಸರ್ಕಾರದ ನೀರು ಉಪಯೋಗಿಸಿಕೊಳ್ಳುವದಕ್ಕಾಗಿ ಅದರ ಮೇಲೆ ನೀರು ಸರದಿ ಕಂದಾಯವನ್ನು ತರೀ ಕಂದಾಯಕ್ಕೆ ಸೇರಿಸದೆ ಪ್ರತ್ಯೇಕವಾಗಿ ವಸೂಲಾಗುತ್ತಿದ್ದರೆ, ಅಂಥಾ ಜಮೀನುಗಳಿಗೆ ತರಿಯಾಗಿ ವಿಂಗಡಿಸಲ್ಪಟ್ಟು ತರಿ ಕಂದಾಯ ತೆರುವ ಜಮೀನುಗಳಿಗೆ ತೋರಿಸುವಂಥಾ ರಿಯಾಯಿತಿಗಳನ್ನು ತೋರಿಸಬೇಕು.

6. ಬಾಗಾಯಿತು ಜಮೀನಿಂತ ವಿಂಗಡಿಸಿದ ಜಮೀನುಗಳ ಕಂದಾಯ.—ಬಾಗಾಯಿತು ಜಮೀನುಗಳಿಂತ ತರಗತಿ ವಿಂಗಡಿಸಿರುವ ಜಮೀನುಗಳಲ್ಲಿ ಸಾಮಾನ್ಯವಾಗಿ ತರಿ ಫಸಲನ್ನು ಇಡುತ್ತಾ ಇದ್ದರೆ, ಅಂಥಾ ಜಮೀನುಗಳಿಗೆ ತರಿ ಜಮೀನುಗಳಿಗೆ ಮೇಲೆ ತೋರಿಸಿರುವ ರಿಯಾಯಿತಿಯನ್ನೇ ತೋರಿಸತಕ್ಕದ್ದು.

7. ಅಡಿಕೆ ಮರಗಳಾಗಲಿ ತೆಂಗಿನಮರಗಳಾಗಲಿ ಅಥವಾ ಅವುಗಳ ಫಸಲಾಗಲಿ ಬಹಳವಾಗಿ ನಷ್ಟವಾಗಿದ್ದರೆ, ಡೆಪ್ಯುಟಿ ಕಮಿಷನರು, ಅಂಥಾ ಜಮಿನಿನ ಅರ್ಧ ಕಂದಾಯದ ವಸೂಲಾತಿಯನ್ನು ಕೆಲವು ಕಾಲ ನಿಲ್ಲಿಸಿಡಬಹುದು. ಇದಕ್ಕೆ ಕಾರಣಗಳನ್ನು ರಿಕಾರ್ಡು ಮಾಡಬೇಕು.

8. ಲೋಕಲ್ ಸೆಸ್ಸುಗಳು.—ಕಂದಾಯವನ್ನು ಮೊಫ್ ಮಾಡಿದ ಮಾತ್ರಕ್ಕೆ, ಲೋಕಲ್ ಸೆಸ್ಸನ್ನೂ ಮೊಫು ಮಾಡಕೂಡದು. ಲೋಕಲ್ ಸೆಸ್ಸುಗಳನ್ನು ಮಾಮೂಲ್ ಪೇರಿಗೆ ಒಟ್ಟು ಕಂದಾಯದಹಾಗೆ ವಸೂಲ್ಮಾಡಲೇಬೇಕು. (ಮೊಫು ಮಾಡಿದ ಭಾಗದ ಕಂದಾಯದಹೀಲೂ ಈ ಸೆಸ್ಸನ್ನು ವಸೂಲ್ಮಾಡಬೇಕು.) ಈ ಸೆಸ್ಸುಗಳ ವಸೂಲಾತಿಯನ್ನು ಕೆಲವು ಕಾಲ ನಿಲ್ಲಿಸಿ ರಿಯಾಯಿತಿ ತೋರಿಸುವದು ಅವಶ್ಯಕವೆಂದು ಡೆಪ್ಯುಟಿ ಕಮಿಷನರಿಗೆ ತೋರಿದರೆ ಅಂಥಾ ವಿಶೇಷ ಸಂದರ್ಭಗಳಲ್ಲಿ ಮಾತ್ರ ಕೆಲವುಕಾಲ ವಸೂಲಾತಿಯನ್ನು ನಿಲ್ಲಿಸಬಹುದು.

9. ಮೈನರ್ ಯಾ ಚಿಲ್ಲರೆ ಇನಾಂ ಜಮಿನುಗಳು.—ಕಂದಾಯ ವಸೂಲಾತಿಯನ್ನು ಕೆಲವುಕಾಲ ನಿಲ್ಲಿಸಿಡುವ ವಿಚಾರದಲ್ಲಿಯೂ ಕಂದಾಯವನ್ನು ಮೊಫು ಮಾಡುವ ವಿಚಾರದಲ್ಲಿಯೂ ಕೊಟ್ಟಿರುವ ಪೇಲ್ಕಂಡ ಹುಕುಮುಗಳು, ಸಂಪೂರ್ಣ ಕಂದಾಯ ದಾಖಲಾದ ಚಿಲ್ಲರೆ ಇನಾಮು ಜಮಿನುಗಳಿಗೂ ಅಥವಾ ಸರ್ವೆ ಸೆಟ್ಲ್ ಮೆಂಟಿನೆಲ್ಲಿ ಬೆಲೆ ನಿಷ್ಕರ್ಷೆಯಾದ ಮೊಬಲಗಿಗೆ ಸಮಾನವಾದ ಅಥವಾ ಹೆಚ್ಚಾದ ಕ್ವೀಟ್‌ರೆಂಟ್ ಯಾ ಜೋಡಿ ದಾಖಲಾದ ಚಿಲ್ಲರೆ ಇನಾಮು ಜಮಿನುಗಳಿಗೂ ಸಹ ಲಗಾವಾಗತಕ್ಕದ್ದು.

10. ಖುಲ್ಲು ಇನಾಂ ಗ್ರಾಮಗಳು.—ಸರ್ಕಾರದ ಆಡಳಿತದಲ್ಲಿರುವ ಖುಲ್ಲು ಇನಾಂ ಗ್ರಾಮಗಳಿಗೂ ಸಹ ಪೇಲ್ಕಂಡ ಹುಕುಂಗಳು ಲಗಾವಾಗುತ್ತವೆ.

11. ಸಾಮಾನ್ಯವಾದ ಷರಾಗಳು.—ಈ ಹುಕುಂಪ್ರಕಾರ ಮೊಫು ಮಾಡಿದ ಕಂದಾಯಗಳನ್ನೆಲ್ಲಾ ಚನ್ನಾಗಿ ಪ್ರಕಟಿಸಿ ಅವುಗಳನ್ನು ರೈತರ ಪಟ್ಟಿಬುಕ್ಕುಗಳಲ್ಲಿ ದಾಖಲ್ಮಾಡಿಸುವಂತೆ ಜಮಾಬಂದಿ ಆಫಿಸರುಗಳು ಹುಷಾರಿಯಿಂದ ನೋಡಿಕೊಳ್ಳಬೇಕು.

12. ಗ್ರಾಮಗಳಿಗೂ ಒಂದೇ ತರಹೆಯ ಪ್ರದೇಶಗಳಿಗೂ ಎಲ್ಲಾ ಒಟ್ಟಾಗಿ ಕಂದಾಯವನ್ನು ಮೊಫು ಮಾಡಬೇಕು. (ಕಂದಾಯವನ್ನು ಮೊಫು ಮಾಡುವುದಲ್ಲಿಯೇ ಆಗಲಿ ಅಥವಾ ಅದರ ವಸೂಲಾತಿಯನ್ನು ಕೆಲವುಕಾಲ ನಿಲ್ಲಿಸಿ ಇಡುವುದರಲ್ಲಿಯೇ ಆಗಲಿ) ಇಂಥಾ ರಿಯಾಯಿತಿಯನ್ನು ತೋರಿಸುವಾಗ್ಗೆ ಜಮಿನಿನಲ್ಲಿ ಉತ್ಪತ್ತಿಯಾದ ಫಸಲಿಗನುಸಾರವಾಗಿ ಮಾಡತಕ್ಕದ್ದೇ ಹೊರತು ಸದರಿ ಜಮಿನಿನ ಹಿಡುವಳಿದಾರನ ಸ್ಥಿತಿಯನ್ನು ಆಲೋಚಿಸಿ ಮಾಡತಕ್ಕದ್ದಲ್ಲ.

13. ವಸೂಲಾಗಬೇಕಾದ ಅರ್ಧ ಕಂದಾಯವನ್ನು ಕಾಲಕ್ಕೆ ಸರಿಯಾಗಿ ಕೊಡದೆಹೋದ ಸಂದರ್ಭದಲ್ಲಿ ಬಾಕಿ ಅರ್ಧ ಕಂದಾಯವನ್ನು ಮೊಫು ಮಾಡುವುದಿಲ್ಲವೆಂತ ಯಾವ್ರದಾದರೂ ಒಂದೊಂದು ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರಾಗಲಿ ಸಬ್ ಡಿವಿಜ್ ಆಫಿಸರಾಗಲಿ ತಿರಸ್ಕರಿಸಬಹುದು.

14. ಪೇಲ್ಕಂಡ ಹುಕುಂಗಳು ಈ ಕೆಳಗೆ ತೋರಿಸಿರುವ ಪ್ರದೇಶಗಳಲ್ಲಿ ಜಾರಿಯಲ್ಲಿ ಬರತಕ್ಕದ್ದು:—

ಕೋಲಾರ ಡಿಸ್ಟ್ರಿಕ್ಟು	ತಮಾಂ ಡಿಸ್ಟ್ರಿಕ್ಟು	ಈ ಹುಕುಮಿಗೆ ಲಗ ತ್ತಿರುವ ಪಟ್ಟಿಯನ್ನು ನೋಡತಕ್ಕದ್ದು.
ತುಮಕೂರು ,,	,,	
ಬೆಂಗಳೂರು ,,		
ಮೈಸೂರು ,,		
ಹಾಸನ ,,		
ಕಡೂರು ,,		
ಶಿವಮೊಗ್ಗಾ ,,		
ಚಿತ್ರದುರ್ಗ ,,		

ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರಿಟರಿ.

ಪಟ್ಟಿ.

ಬೆಂಗಳೂರು ಡಿಸ್ಟ್ರಿಕ್ಟು.

ತಾಲ್ಲೂಕಿನ ಹೆಸರು.	ಹೋಬಳಿಯ ಹೆಸರು.
1. ಬೆಂಗಳೂರು	ಹೆಸರುಘಟ್ಟ.
2. ಹೊಸಕೋಟೆ	1. ಕಸಬಾ ಹೋಬಳಿ
	2. ಜಡಿಗೇನಹಳ್ಳಿ
	3. ನಂದಗುಡಿ
	4. ಸೂಲಿಬೆಲೆ
3. ದೇವನಹಳ್ಳಿ	ತಾಲ್ಲೂಕೆಲ್ಲಾ.
4. ದೊಡ್ಡಬಳ್ಳಾಪುರ	1. ಮಧುರೆ
	2. ದೊಡ್ಡಬಿಳವಂಗಲ
	3. ಕಸಬಾ ಹೋಬಳಿ
5. ನೆಲವಂಗಲ	1. ಕಸಬಾ ಹೋಬಳಿ
	2. ದಾಸನಪುರ
	3. ತ್ಯಾಮಗೊಂಡ್ಲು
6. ಮಾಗಡಿ	1. ತಿಪ್ಪಸಂದ್ರ
	2. ಕುದೂರು
	3. ಸೋಲೂರು
7. ಚನ್ನಪಟ್ಟಣ	1. ವಿರುಪಾಕ್ಷಿಪುರ
	2. ಕಸಬಾ ಹೋಬಳಿ
	3. ಮಳೂರು

ತುಮಕೂರು ಡಿಸ್ಟ್ರಿಕ್ಟು—

ತಮಾಂ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು—

ತಮಾಂ ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು.

1. ನಾಗಮಂಗಲ	ತಮಾಂ ತಾಲ್ಲೂಕು.
2. ಕೃಷ್ಣರಾಜಪೇಟೆ	1. ಸಂತೆಬಾಚಳ್ಳಿ
	2. ಕಿಕ್ಕೇರಿ
	3. ಕಸಬಾ ಹೋಬಳಿ
3. ಮಂಡ್ಯ	ತಮಾಂ ತಾಲ್ಲೂಕು.

ಹಾಸನ ಡಿಸ್ಟ್ರಿಕ್ಟು.

1. ಅರಸೀಕೆರೆ	ತಮಾಂ ತಾಲ್ಲೂಕು.
2. ಚನ್ನರಾಯಪಟ್ಟಣ	1. ಕಸಬಾ ಹೋಬಳಿ
	2. ಬಾಗೂರು
	3. ಅಣತಿ
	4. ನುಗ್ಗಿಹಳ್ಳಿ
	5. ಹಿರಿಸಾವೆ
	6. ಶ್ರವಣಬೆಳಗೊಳ
3. ಹೊಳೆನರಸೀಪುರ	1. ಕಸಬಾ ಹೋಬಳಿ
	2. ದೊಡ್ಡಕಡನೂರು
4. ಬೇಲೂರು	1. ಹಳೆಬೀಡು
	2. ಮೂಡಿಹಳ್ಳಿ

ಶಿವಮೊಗ್ಗ ಡಿಸ್ಟ್ರಿಕ್ಟು.

1. ಶಿವಮೊಗ್ಗ	ತಾಲ್ಲೂಕೆಲ್ಲಾ.
2. ಚನ್ನಗಿರಿ	ಡಿಟೋ
3. ಹೊನ್ನಾಳಿ	ಸಾಸವೆಹಳ್ಳಿ

ಕಡೂರು ಡಿಸ್ಟ್ರಿಕ್ಟು.

ತಾಲ್ಲೂಕಿನ ಹೆಸರು.				ಹೋಬಳಿಯ ಹೆಸರು.
1. ಚಿಕ್ಕಮಗಳೂರು	.....	...	....	ಲಕ್ಯ
2. ಕಡೂರು	....	....	....	ತಾಲ್ಲೂಕೆಲ್ಲಾ.

ಚಿತ್ರದುರ್ಗ ಡಿಸ್ಟ್ರಿಕ್ಟು.

1. ಚಿತ್ರದುರ್ಗ	....	....	....	1. ಕಸಬಾ ಹೋಬಳಿ 2. ತುರುವನೂರು
2. ಚಳ್ಳಕೆರೆ	....	....	....	ತಾಲ್ಲೂಕೆಲ್ಲಾ
3. ಹಿರಿಯೂರು	....	....	....	ಡಿಟೋ
4. ದಾವಣಗೆರೆ	....	....	....	1. ಕಸಬಾ ಹೋಬಳಿ 2. ಹದಡಿ
5. ಜಗಲೂರು	....	....	....	1. ಜಗಲೂರು ಹೋಬಳಿ
6. ಹೊಸದುರ್ಗ	....	....	....	1. ಹೊಸದುರ್ಗ 2. ಮಾಕೋಡು 3. ಬೂದಿಹಾಳು 4. ಮಾಡದಕೆರೆ
7. ಹಿರಿಯೂರ (ಸಬ್ ತಾಲ್ಲೂಕು)	....	....	....	1. ಕಸಬಾ ಹೋಬಳಿ 2. ಮಳಲಿಬೆನ್ನೂರು

ತಾರೀಖು 18ನೆ ಮೇ 1909.

ನಂ. 11520—ಸ್ಯಾನಿಟೆರಿ 76-08-50, ಸಮಸ್ತ ಜನರ ತಿಳಿವಳಿಕೆ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳಿಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.				ತಾಲ್ಲೂಕು.
ಸರಗೂರು	...	...	...	ಚಾಮರಾಜನಗರ
ಮಳವಳ್ಳಿ	....	...	...	ಡಿಟೋ
ಮುತ್ತನಹಳ್ಳಿ	...	...	...	ಮಳವಳ್ಳಿ
ಗಂಜಾಂ	...	...	...	ಶ್ರೀರಂಗಪಟ್ಟಣ
ಗುಂಡ್ಲ ಪೇಟೆ	...	...	...	ಗುಂಡ್ಲಪೇಟೆ
ಬೆಳ್ಳುಳ್ಳಿ	...	....	...	ಎಡತೊರೆ
ದೊರನಹಳ್ಳಿ	...	...	...	ಡಿಟೋ
ಕೆಂಪಲಾಪುರ	...	...	...	ಹುಣಸೂರು

ತಾರೀಖು 1ನೆ ಜೂ೯ 1909.

ನಂ. 12050—ಸ್ಯಾನಿಟೆರಿ 61-08-131, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಚಿನ್ನಕೇಶವ ಪೆರುಮಾಳ್ ಉತ್ಸವ ಮತ್ತು ದನಗಳ ಸಂತೆ.	ಕನ್ನಿಸೇರಿ	ಸತ್ತೂರು...	ತಿನ್ನವೆಲ್ಲಿ...	29—5—09	25—6—09	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1909ನೆ ಮೇ 19ನೆ 415ನೆ ನಂಬರ್ ಪ್ರಕಾರ.
				ಉಭಯ ದಿನಗಳೂ ಸೇರಿ.		
ಭುವನೇಶ್ವರರ ಉತ್ಸವ ಮತ್ತು ದನಗಳ ಸಂತೆ.	ಮುಟ್ಟುಲಾಪುರಂ.	ಡಿಟೋ	ಡಿಟೋ	19—6—09	23—7—09	ಡಿಟೋ
				ಉಭಯ ದಿನಗಳೂ ಸೇರಿ		
ದ್ವಾದಶ ಗರುಡೋತ್ಸವಂ ಉತ್ಸವ..	ತಂಜಾವೂರು	...	ತಂಜಾವೂರು	4—6—09	10—6—09	ಡಿಟೋ ನಂ. 417
				ಉಭಯ ದಿನಗಳೂ ಸೇರಿ.		

ತಾರೀಖು 22ನೆ ಮೇ 1909.

ನಂ. 11682—ಮ್ಯು. 341-06-149, ದೇವನಹಳ್ಳಿ ಟವನನ್ನು ಫಲಾನಾ ಸರಹದ್ದುಗಳುಳ್ಳ ಮ್ಯುನಿಸಿಪಾಲಿಟಿಯಾಗಿ ವಿಭಾಗಿಸಬೇಕೆಂದು ಉದ್ದೇಶಿಸಿ ಇದೆ ಎಂಬುದಾಗಿ ಬಂದು ಪ್ರಕಟನೆಯನ್ನು 1906ನೆ ಇಸವಿಯ 7ನೆ ನಂಬರ್ ಮ್ಯುನಿಸಿಪಲ್ ರೆಗ್ಯುಲೇಷನಿನ 8ನೆ ಪ್ರಕರಣದ ಮೇರೆಗೆ 1908ನೆ ಇಸವಿಯ ಡಿಸೆಂಬರು 15ನೆ ತಾರೀಖಿನಲ್ಲಿ 1908ನೆ ಇಸವಿಯ ಡಿಸೆಂಬರು 24ನೆ ತಾರೀಖಿನ ಗೆಜೆಟ್ಟಿನ 11ನೆ ಭಾಗದಲ್ಲಿ ಇಂಗ್ಲೀಷ್ ಗೆಜೆಟ್ಟಿನ 1532ನೆ ಪುಟದಲ್ಲಿಯೂ, ಕನ್ನಡ ಗೆಜೆಟ್ಟಿನ 771ನೆ ಪುಟದಲ್ಲಿಯೂ ಪ್ರಾಯಿಷ್ಯಾಡಿರುವುದಲ್ಲದೆ ಸದರೀ ದೇವನಹಳ್ಳಿ ಟವನಿನ ಬಹಿರಂಗವಾದ ಸ್ಥಳಗಳಲ್ಲಿಯೂ ಚಿಕಟ್ಟಾಯಿಸಿದುದರಿಂದಲೂ, ಸದರಿ ಉದ್ದೇಶಕ್ಕೆ ಯಾವ ಆಕ್ಷೇಪಣೆಯೂ ಬಂದಿರುವುದಿಲ್ಲವಾದುದರಿಂದಲೂ, ಮೈಸೂರು ಶ್ರೀಮದ್ ಮಹಾರಾಜಾ ಸಾಹೇಬ್ಬರವರ ಸರ್ಕಾರವರು ಸದರಿ ರೆಗ್ಯುಲೇಷನಿನ 4 (1)ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸದರಿ ದೇವನಹಳ್ಳಿ ಟವನನ್ನು ಮ್ಯುನಿಸಿಪಾಲಿಟಿಯಾಗಿ ವಿಭಾಗಿಸಿ ಸದರಿ ಮ್ಯುನಿಸಿಪಾಲಿಟಿಯು ಸರಹದ್ದು 1909ನೆ ಇಸವಿಯ ಜುಲೈ 1ನೆ ತಾರೀಖಿನ ದಿನವೂ ಆ ಅನಂತರವೂ ಮುಂದೆ ನಮೂದಿಸಿರುವ ಪ್ರಕಾರ ಇರಬೇಕೆಂದು ಆಜ್ಞಾಪಿಸಿರುತ್ತಾರೆ :—

I. ದೇವನಹಳ್ಳಿ ಟವನಿನ ಎಲ್ಲೆಯು ಸರ್ವೆ 351ನೆ ನಂಬರು ಈಶಾನ್ಯ ಮೂಲೆಯಲ್ಲಿ ಪ್ರಾರಂಭವಾಗಿ ದಕ್ಷಿಣ ಮತ್ತು ಪೂರ್ವ ಮಾರ್ಗವಾಗಿ ವೇಲ್ಲಂಡ 351ನೆ ನಂಬರಿನ ಪೂರ್ವ ಎಲ್ಲೆಯು ಮಾರ್ಗವಾಗಿ ಹೊರಟು ಸರ್ವೆ 352ನೆ ನಂಬರಿನ ಪೂರ್ವ ಮತ್ತು ದಕ್ಷಿಣ ಎಲ್ಲೆಗಳ ಮಾರ್ಗವಾಗಿಯೂ ಮತ್ತು ದೇವನಹಳ್ಳಿಯಿಂದ ವಡಿಗೇನಹಳ್ಳಿಗೆ ಹೋಗುವ ಹಳೇರಸ್ತೆ ಮಾರ್ಗವಾಗಿಯೂ ಹೋಗಿ ಗೋಕೆರೆ ಗ್ರಾಮಕ್ಕೆ ಹೋಗುವ ಕಾಲುದಾರಿಯನ್ನು ಹಾಯುತ್ತದೆ; ಅಲ್ಲಿಂದ ಸರ್ವೆ 385-386-387-518-519ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೊರಟು, ಬೂದಿಹಾಳು ಗ್ರಾಮಕ್ಕೆ ಹೋಗುವ ಕಾಲುದಾರಿಯನ್ನು ಹಾದು ದಕ್ಷಿಣಾಭಿಮುಖವಾಗಿ ಸರ್ವೆ 515—462ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿ ಅಲ್ಲಿಂದ ಸ್ವಲ್ಪ ಪಶ್ಚಿಮಕ್ಕೆ ತಿರುಗಿ ಸರ್ವೆ 463ನೆ ನಂಬರಿನ ಆಗ್ನೇಯ ಮೂಲೆಯನ್ನು ಸಂಧಿಸಿ ಅಲ್ಲಿಂದ ದಕ್ಷಿಣ ಮಾರ್ಗವಾಗಿ ಸರ್ವೆ 464ನೆ ನಂಬರಿನ ಪೂರ್ವ ಎಲ್ಲೆ ಹಿಡಿದು ವೇಲ್ಲಂಡ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ.

II. ಅಲ್ಲಿಂದ ಎಲ್ಲೆಯು ಸರ್ವೆ 464—507—508ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೋಗಿ ಅಲ್ಲಿಂದ ದಕ್ಷಿಣಾಭಿಮುಖವಾಗಿ ಸರ್ವೆ 543ನೆ ನಂಬರಿನ ಪೂರ್ವದ ಎಲ್ಲೆ ಮಾರ್ಗವಾಗಿ ಹೊರಟು ಸರ್ವೆ 543—544—72ನೆ ನಂಬರುಗಳ ದಕ್ಷಿಣದಲ್ಲಿರುವ ಹಳ್ಳದ ಮಾರ್ಗವಾಗಿ ಹೋಗಿ ಬೆಂಗಳೂರು-ಬಳ್ಳಾರಿ ರಸ್ತೆಯನ್ನು ಹಾದು ಸರ್ವೆ 68—67ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ನೀದಾಹೋಗಿ ಸರ್ವೆ 67ನೆ ನಂಬರಿನ ನೈರುತ್ಯ ಮೂಲೆಯನ್ನು ಸಂಧಿಸುತ್ತದೆ.

III. ಅಲ್ಲಿಂದ ಎಲ್ಲೆಯು ಉತ್ತರಕ್ಕೆ ತಿರುಗಿ ಸರ್ವೆ 67—66—65—64—57—56—55—48—45 ಮತ್ತು 44ನೆ ನಂಬರುಗಳ ಪಶ್ಚಿಮ ಎಲ್ಲೆಯನ್ನು ಅನುಸರಿಸಿ ಅಲ್ಲಿಂದ ಕೊಂಚ ಪೂರ್ವಕ್ಕೆ ತಿರುಗಿ ಸರ್ವೆ 44—40ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿಯೂ 39—31ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿಯೂ ಅಲ್ಲಿಂದ ಸರ್ವೆ 30ನೆ ನಂಬರು ಕುಡಿಯುವ ನೀರು ಕೆರೆಯ ಪಶ್ಚಿಮ ಕಟ್ಟೆಮೇಲೆ ಹೊರಟು ಬಂದು ಹಳ್ಳವನ್ನು ಹಾದು ಉತ್ತರಾಭಿಮುಖವಾಗಿ ಸರ್ವೆ 136—142—143ನೆ ನಂಬರುಗಳ ಪಶ್ಚಿಮ ಎಲ್ಲೆಯನ್ನು ಅನುಸರಿಸಿಕೊಂಡು ಹೋಗಿ ಸರ್ವೆ 143ನೆ ನಂಬರಿನ ವಾಯವ್ಯ ಮೂಲೆಬಳಿ ಕೋಲಾರ-ದೊಡ್ಡಬಳ್ಳಾಪುರ ರಸ್ತೆಯನ್ನು ಸಂಧಿಸುತ್ತದೆ.

IV. ಇಲ್ಲಿಂದ ಎಲ್ಲೆಯು ಪೂರ್ವ ಮಾರ್ಗವಾಗಿ ಸರ್ವೆ 143—144—146—147—148—202—201—206—207 ಈ ನಂಬರುಗಳ ಉತ್ತರ ಎಲ್ಲೆಯನ್ನು ಅನುಸರಿಸಿ ಬಂದು ಹಳ್ಳವನ್ನು ಹಾದು ಸರ್ವೆ 209—210—211ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೊರಟು ಬೆಂಗಳೂರು-ಬಳ್ಳಾರಿ ರಸ್ತೆಯನ್ನು ಹಾದು ಸರ್ವೆ 217—218—351ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಸರ್ವೆ 351ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ.

3. ಇದರಿಂದ ಈ ಕೆಳಗೆ ಕಂಡ ಕಸಬು ದೇವನಹಳ್ಳಿಗೆ ಸೇರಿದ ನಂಬರುಗಳು ದೇವನಹಳ್ಳಿ ಮ್ಯುನಿಸಿಪಾಲಿಟಿಯ ಸರಹದ್ದಿನಲ್ಲಿ ಸೇರಿರುತ್ತವೆ :—

ಸರ್ವೆ 1ರ ಲಾಗಾಯಿತು 29 ಮತ್ತು 30 (ಕುಡಿಯುವ ನೀರು ಕೆರೆ), ಸರ್ವೆ 31ರ ಲಾಗಾಯಿತು 72ರ ವರೆಗೂ 136ರ ಲಾಗಾಯಿತು 144ರ ವರೆಗೂ, 146ರ ಲಾಗಾಯಿತು 202ರ ವರೆಗೂ, 206ರ ಲಾಗಾಯಿತು 218ರ ವರೆಗೂ, 351—352—354ರ ಲಾಗಾಯಿತು 372ರ ವರೆಗೂ, 374ರ ಲಾಗಾಯಿತು 387ರ ವರೆಗೂ, 462—463—464—507ನೆ ನಂಬರು ಲಾಗಾಯಿತು 515ರ ವರೆಗೂ, 518ರ ಲಾಗಾಯಿತು 545ರ ವರೆಗೂ 547ರ ಲಾಗಾಯಿತು 552ರ ವರೆಗೂ.

ತಾರೀಖು 25ನೆ ಮೇ 1909.

ನಂ. 11725—ಮೆಡಿಕಲ್. 26-08-4, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣದ ಮೇರಿಗೆ ಹೌನರೆರಿ ಅಸಿಸ್ಟೆಂಟ್ ಸರ್ಜ್ಜರಾದ ಮಿ॥ ಡಿ. ಎಂ. ಜ್ಞಾನಪ್ರಿಯಂ ಪಿಳ್ಳೆಯವರಿಗೆ 1909ನೆ ಇಸವಿ ಏಪ್ರಿಲ್ 26ನೆ ತಾರೀಖು ಲಾಗಾಯಿತು 15 ದಿನಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ಮಾಡಿ ಇರುತ್ತೆ.

ತಾರೀಖು 25ನೆ ಮೇ 1909.

ನಂ. 11726—ಮೆಡಿಕಲ್. 238-08—2, ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣದ ಮೇರಿಗೆ ಸಬ್ ಅಸಿಸ್ಟೆಂಟ್ ಸರ್ಜ್ಜರಾದ ಮಿ॥ ಜೆ. ವಿ. ವ್ಯಾಸ್‌ಕಾರ್ಥಸ್ ರವರಿಗೆ 1909ನೆ ಏಪ್ರಿಲ್ 27ನೆ ತಾರೀಖು ಲಾಗಾಯಿತು 30 ದಿನಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಿ ಇರುತ್ತೆ.

2. ಮೈಸೂರಲ್ಲಿ ಪ್ಲೇಗ್ ಬಿಡಬು ಹಾಕುವ ಕೆಲಸದಿಂದ ಮೆಡಿಕಲ್ ಇಲಾಖೆಗೆ ವಾಪಸು ಕಳುಹಿಸಲ್ಪಟ್ಟ ಸಬ್ ಅಸಿಸ್ಟೆಂಟ್ ಸರ್ಜ್ಜ ಮಿ॥ ಎ. ಎಸ್. ನಂಜುಂಡಯ್ಯನವರು ಮಿ॥ ವ್ಯಾಸ್‌ಕಾರ್ಥಸ್‌ರವರ ಗೈರಹಾಜರಿ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವತನಕ ಇಂಪೀರಿಯಲ್ ಸರ್ವಿಸ್ ರಿಜರ್ವೆಂಟಿನ ಮೆಡಿಕಲ್ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 22ನೆ ಮೇ 1909.

ನಂ. 11683—ಮ್ಯು. 341-06-150, ದೊಡ್ಡಬಳ್ಳಾಪುರ ಟವನನ್ನು ಫಲಾನಾ ಸರಹದ್ದುಗಳ್ಳಿಳ್ಳ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿ ಇದೆ ಎಂಬವಾಗಿ ಬಂದು ಪ್ರಕಟನೆಯನ್ನು 1906ನೆ ಇಸವಿಯ 7ನೆ ನಂಬರು ಮ್ಯುನಿಸಿಪಲ್ ರೆಗ್ಯುಲೇಷನಿನ 8ನೆ ಪ್ರಕರಣದ ಮೇರೆಗೆ 1908ನೆ ಇಸವಿಯ ಡಿಸೆಂಬರ್ 15ನೆ ತಾರೀಖಿನಲ್ಲಿ 1908ನೆ ಇಸವಿಯ ಡಿಸೆಂಬರ್ 24ನೆ ತಾರೀಖಿನ ಗೆಜೆಟ್ಟಿನ II ನೆ ಭಾಗದಲ್ಲಿ ಇಂಗ್ಲೀಷ್ ಗೆಜೆಟ್ಟಿನ 1532ನೆ ಪುಟದಲ್ಲಿಯೂ, ಕನ್ನಡ ಗೆಜೆಟ್ಟಿನ 770ನೆ ಪುಟದಲ್ಲಿಯೂ ಪ್ರಸಿದ್ಧಮಾಡಿರುವುದಲ್ಲದೆ ಸದರೀ ದೊಡ್ಡಬಳ್ಳಾಪುರ ಟವನಿನ ಬಹಿರಂಗವಾದ ಸ್ಥಳಗಳಲ್ಲಿಯೂ ಚಿಕಟವಯಿಸಿದುದರಿಂದಲೂ, ಸದರಿ ಉದ್ದೇಶಕ್ಕೆ ಯಾವ ಆಕ್ಷೇಪಣೆಯೂ ಬಂದಿರುವುದಿಲ್ಲವಾದುದರಿಂದಲೂ, ಮೈಸೂರು ಶ್ರೀಮದ್ ಮಹಾರಾಜಾ ಸಾಹೇಬ್ ಬಹದ್ದೂರ್‌ವರ ಸರ್ಕಾರದವರು ಸದರಿ ರೆಗ್ಯುಲೇಷನಿನ 4 (1)ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸದರಿ ದೊಡ್ಡಬಳ್ಳಾಪುರ ಟವನನ್ನು ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಿ ಸದರಿ ಮ್ಯುನಿಸಿಪಾಲಿಟಿಯ ಸರಹದ್ದು 1909ನೆ ಇಸವಿಯ ಜುಲೈ 1ನೆ ತಾರೀಖಿನ ದಿನವೂ ಆ ಅನಂತರವೂ ಮುಂದೆ ನಮೂದಿಸಿರುವ ಪ್ರಕಾರ ಇರಬೇಕೆಂದು ಅಪ್ಪಣೆ ದಯಪಾಲಿಸಿರುತ್ತಾರೆ :—

I. ದೊಡ್ಡಬಳ್ಳಾಪುರ ಟವ್ನ ಎಲ್ಲೆಯು ತಿಗಳೆ ಬಾಗಾಯಿತು ಗ್ರಾಮದ ಸರ್ವೆ 57ನೆ ನಂಬರಿನ ವಾಯವ್ಯ ಮೂಲೆಯಿಂದ ಪ್ರಾರಂಭಿಸಿ ಮೇಲ್ಕಂಡ ತಿಗಳೇ ಬಾಗಾಯಿತು ಸರ್ವೆ 57—58—59—60—61—62—63—64—65—66 ಮತ್ತು 67ನೆ ನಂಬರುಗಳ ಉತ್ತರ ಗಡೀಮಾರ್ಗವಾಗಿ ಹೋಗುತ್ತದೆ.

II. ಅಲ್ಲಿಂದ ಎಲ್ಲೆಯು ಬೆಂಗಳೂರು-ದೊಡ್ಡಬಳ್ಳಾಪುರ ರಸ್ತೆಯನ್ನು ಹಾದು ಉತ್ತರಕ್ಕೆ ತಿರುಗಿ ಸದರೀ ರಸ್ತೆಯ ಮಾರ್ಗವಾಗಿ ತಿಗಳೇ ಬಾಗಾಯಿತು ಸರ್ವೆ 24ನೆ ನಂಬರಿನ ನೈರುತ್ಯ ಮೂಲೆಯನ್ನು ಸಂಧಿಸಿ ಮೇಲ್ಕಂಡ ಗ್ರಾಮದ ಸರ್ವೆ 24ನೆ ನಂಬರಿನ ಪಶ್ಚಿಮ ಮತ್ತು ಉತ್ತರ ಗಡಿ ಮಾರ್ಗವಾಗಿಯೂ ಸರ್ವೆ 35—20—16ನೆ ನಂಬರುಗಳ ಪಶ್ಚಿಮ ಗಡಿ ಮಾರ್ಗವಾಗಿಯೂ ಮತ್ತು ಸರ್ವೆ 11ನೆ ನಂಬರಿನ ದಕ್ಷಿಣವಾರ್ಗವಾಗಿಯೂ ಹೋಗಿ ಅಲ್ಲಿಂದ ಎಲ್ಲೆಯು ಬೆಂಗಳೂರು-ದೊಡ್ಡಬಳ್ಳಾಪುರ ರಸ್ತೆಯ ಪೂರ್ವ ಬಾಜೂದಲ್ಲಿ ಹೊರಟು ಸದರೀ ರಸ್ತೆಯನ್ನು ಹಾದು ರೋಜೀಪುರ ಗ್ರಾಮದ ಸರ್ವೆ 82ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ.

III. ಇಲ್ಲಿಂದ ಎಲ್ಲೆಯು ರೋಜೀಪುರ ಗ್ರಾಮದ 82—83 ಮತ್ತು 86ನೆ ನಂಬರುಗಳ ದಕ್ಷಿಣ ಮಾರ್ಗವಾಗಿ ಹೋಗಿ ಸರ್ವೆ 106ನೆ ನಂಬರು ತಿಮ್ಮಣ್ಣಕುಂಟೆ ಕೆರೆಯ ಆಗ್ನೇಯ ಮೂಲೆಯನ್ನು ಬಳಸಿಕೊಂಡು ರೋಜೀಪುರ ಗ್ರಾಮದ ಸರ್ವೆ 102—101ನೆ ನಂಬರುಗಳ ದಕ್ಷಿಣ ದಿಕ್ಕಿನಲ್ಲಿ ಹೊರಟು ನಂದೀದುರ್ಗಕ್ಕೆ ಹೋಗುವ ರಸ್ತೆಯನ್ನು ಹಾದು ಗಂಗಾಧರಪುರ ಗ್ರಾಮದ ಸರ್ವೆ 14ನೆ ನಂಬರಿನ ಆಗ್ನೇಯ ಮೂಲೆಯನ್ನು ಸಂಧಿಸಿ ಅಲ್ಲಿಂದ ಉತ್ತರಕ್ಕೆ ತಿರುಗಿ ಸದರೀ ಸರ್ವೆ ನಂಬರಿನ ಪೂರ್ವ ಕಡೆ ಹೊರಟು ಗಂಗಾಧರಪುರ ಗ್ರಾಮದ ಸರ್ವೆ 13ನೆ ನಂಬರಿನ ದಕ್ಷಿಣ ಗಡಿಯನ್ನು ಸೇರುತ್ತದೆ. ಅಲ್ಲಿಂದ ಸರ್ವೆ 13ನೆ ನಂಬರಿನ ದಕ್ಷಿಣ ಮಾರ್ಗವಾಗಿಯೂ ಸರ್ವೆ 12—15—16ನೆ ನಂಬರುಗಳ ಪೂರ್ವ ಮಾರ್ಗವಾಗಿಯೂ ಹೊರಟು ಗಂಗಾಧರಪುರ ಗ್ರಾಮದ ಸರ್ವೆ 16ನೆ ನಂಬರು ಆಗ್ನೇಯ ಮೂಲೆಯನ್ನು ಸೇರುತ್ತದೆ. ಇಲ್ಲಿಂದ ಸರ್ವೆ 16ನೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ಗಂಗಾಧರಪುರ ಗ್ರಾಮದ ಸರ್ವೆ 17ನೆ ನಂಬರು ಪೂರ್ವ ಗಡಿಯನ್ನು ಸಂಧಿಸುತ್ತದೆ.

IV. ಇಲ್ಲಿಂದ ಎಲ್ಲೆಯು ಕೋಳೂರಿನಿಂದ ಬರತಕ್ಕ ಖಂಡಿರ್ಯೂಡೆಯನ್ನು ಹಾದು ದಕ್ಷಿಣಾಭಿಮುಖವಾಗಿ ಹೋಗಿ ಗಂಗಾಧರಪುರ ಗ್ರಾಮದ ಸರ್ವೆ 17ನೆ ನಂಬರಿನ ಪೂರ್ವಗಡಿ ಮಾರ್ಗವಾಗಿ ಹೊರಟು ಕುರುಬರಹಳ್ಳಿಯಿಂದ ಬರತಕ್ಕ ಮತ್ತೊಂದು ಖಂಡಿರ್ಯೂಡೆಯನ್ನು ಸಂಧಿಸುತ್ತದೆ.

ಇಲ್ಲಿಂದ ಎಲ್ಲೆಯು ಸದರೀ ಬಂಡಿರ್ಯೂಡೆ ಮಾರ್ಗವಾಗಿ ಹೊರಟು ರೋಜೀಪುರ ಗ್ರಾಮದ ಸರ್ವೆ 87ನೆ ನಂಬರಿನ ಉತ್ತರ ಕೊನೆಯನ್ನು ಸೇರುತ್ತದೆ. ಇಲ್ಲಿಂದ ಮೇಲ್ಕಂಡ 87ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಗಡಿ ಮಾರ್ಗವಾಗಿ ಹೊರಟು ಕುರುಬರಹಳ್ಳಿಯಿಂದ ಬರತಕ್ಕ ಬಂಡಿರ್ಯೂಡೆಯನ್ನು ಹಾದು ಪೂರ್ವಕ್ಕೆ ತಿರುಗಿ ವೀರಭದ್ರನಪಾಳ್ಯದ ಸರ್ವೆ 70ನೆ ನಂಬರಿನ ಉತ್ತರಗಡಿ ಮಾರ್ಗವಾಗಿ ಹೊರಡುತ್ತದೆ. ಇಲ್ಲಿಂದ ಎಲ್ಲೆಯು ದಕ್ಷಿಣಾಭಿಮುಖವಾಗಿ ಸರ್ವೆ 70—71—72—3ನೆ ನಂಬರುಗಳ ಪೂರ್ವಕ್ಕೆ ಹೊರಟು ಕರೇನಹಳ್ಳಿಯಿಂದ ಬರತಕ್ಕ ಬಂಡಿರ್ಯೂಡೆಯನ್ನು ಹಾದು ಸರ್ವೆ 4ನೆ ನಂಬರು ಪೂರ್ವಗಡಿ ಮಾರ್ಗವಾಗಿ ಹೊರಡುತ್ತೆ. ಇಲ್ಲಿ ನೆಲವಂಗಲದ ರಸ್ತೆಯನ್ನು ಹಾದು ತಿಗಳೇ ಬಾಗಾಯಿತು ಗ್ರಾಮದ ಸರ್ವೆ 57ನೆ ನಂಬರು ವಾಯವ್ಯ ಮೂಲೆಯನ್ನು ಸೇರುತ್ತೆ.

3. ಇದರಿಂದ ಇದರಡಿಯಲ್ಲಿ ಕಂಡ ಜಮೀನುಗಳು ದೊಡ್ಡಬಳ್ಳಾಪುರ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆ ಸೇರಿರುತ್ತವೆ :-

ಖಾಸ್‌ಬಾಗ್ ಗ್ರಾಮದ ಸರ್ವೆ ನಂಬರು 1ರ ಲಾಗಾಯಿತು 18ರ ವರಿವಿಗೆ ಮತ್ತು ಸದರೀ ಗ್ರಾಮದ ಗಾವ್ರಾಣ.

ತಿಗಳೇ ಬಾಗಾಯಿತು ಗ್ರಾಮದ ಸರ್ವೆ 1—3—4—5—6—7—20—21—22—23—26—27—28—29—30—31 ಮತ್ತು 54ನೆ ನಂಬರುಗಳು.

ರೋಜೀಪುರ ಗ್ರಾಮದ ಸರ್ವೆ ನಂಬರು 87ರ ಲಾಗಾಯಿತು 99ರ ವರೆಗೆ.

ಗಂಗಾಧರಪುರ ಗ್ರಾಮದ ಸರ್ವೆ 14—18—19—20ನೆ ನಂಬರುಗಳು ಮತ್ತು ಹೊಲೆಯರಹಟ್ಟಿ.

ತಾರೀಖು 26ನೆ ಮೇ 1909.

ನಂ. 11832—ಮ್ಯು 322-08-11, ಹುಕುಂ—1907ನೆ ಇಸವಿಯ ಫೆಬ್ರವರಿ 3ನೆ ತಾರೀಖಿನ 7234—ಮ್ಯು. 222-08—2ನೆ ನಂಬರ್ ಸರ್ಕಾರೀ ಹುಕುಂ ವಿಷಯದಲ್ಲಿ, ಮೈಸೂರು ಮ್ಯುನಿಸಿಪಲ್ ಕೌನ್ಸಿಲಿಗೆ ಹೆಸರು ನಮೂದಿನಿಂದಲೂ ಚುನಾವಣೆಯ ಮೂಲಕವೂ ನೊಕರ್ರಾಮಡಲ್ಪಟ್ಟಿರುವ ಈಗಿನ ಮ್ಯುನಿಸಿಪಲ್ ಕೌನ್ಸಿಲರುಗಳ ಉದ್ಯೋಗದ ಅವಧಿಯು 1909ನೆ ಇಸವಿಯ ಜುಲೈ ಮಾಹೆಯ ಆಖೈರ್ ವರೆಗೆ ಪುನಃ ಬಡಾಯಿಸಲ್ಪಡಬೇಕೆಂತ 1906ನೆ ಇಸವಿಯ 7ನೆ ನಂಬರ್ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 17ನೆ ಪ್ರಕರಣದ ಮೇರೆಗೆ ಸರ್ಕಾರದವರು ಈ ಮೂಲಕ ಹುಕುಂ ಮಾಡಿರುತ್ತಾರೆ.

ತಾರೀಖು 29ನೆ ಮೇ 1909.

ನಂ. 11964—Ml. 399-08-19, ಸ॥ 1894ನೆ ವರ್ಷದ 7ನೆ ನಂಬರ ಅಗ್ರಹಾರ ರಗ್ಸ್ಟೇಷನ್ನ 6ನೆ ಪ್ರಕರಣವನ್ನೆಸಗಿಸಲು ಇದರಿಂದ ಪ್ರಸಿದ್ಧ ಪಡಿಸುವುದೇನೆಂದರೆ :—ಇದರಲ್ಲಿ ವಿವರಿಸಿರುವ ಜಮೀನು ಸಾರ್ವಜನಿಕ ಎಂದರೆ, ಸಂಜನಗೂಡು ಮ್ಯುನಿಸಿಪಾಲಿಟಿಯಲ್ಲಿ 20ನೆ ನಂಬರ ಕಚೇರಿಯ ಉಪಯೋಗಕ್ಕೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರಗ್ಸ್ಟೇಷನ್ನ 7 ನೆಯ ಶೆಡ್ಯೂಲಿನ (೮) ಪ್ರಕರಣಗಳ ಸ್ಪಷ್ಟ ಸಂಜನಗೂಡು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಕ್ರಮವು ಜರುಗಿಸಲು ಅಧಿಕಾರ ಕೊಡಲ್ಪಟ್ಟಿದೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಯಾ ಮಾಲೀಕನ ಹೆಸರು.	ಸರ್ವೆ ನಂಬರ್.	ಖಾಲಿ ನಿವೇಶನ ಯಾ ತೆಂಗಿನ ಮರ.	ಒಟ್ಟು ವಿಸ್ತೀರ್ಣ.			ಈಗ ಸಂರಕ್ಷಕಕ್ಕೆ ಬೇಕಾಗಿರುವ ವಿಸ್ತೀರ್ಣ.			ಚತುರ್ಗಡಿ.			
						ಡಿಂಡಿ	ರುಂದಿ.	ಪಗಡಿ	ಡಿಂಡಿ	ರುಂದಿ.	ಚದರ ಗ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			* 1. ಸ್ವತ್ತಿನ ಲಿಂಗಪ್ಪ ಕೃ ಯಾದವ ನಾರಾಯಣ ಚಾರಿ.	343	463	36	$\frac{21+19}{2}$	80	36	$\frac{21+19}{2}$	80 ಪ್ಲಿಂಥ್ 32 ಗಜ ಸಮಾತ್ರ	ಸ್ವತ್ತಿನ ತಪ್ಪಲ್ಲಿ ಯ್ಯುನಸರ ಖಾಲಿ ಜಾಗ.	ರಸ್ತೆ	ಪಟಿಗೀ	ಬಂಡಯ್ಯನವರ ಮನೆ.	ನಾರಾಯಣಚಾರಿ ಮನೆ.
			2. ಬ್ಯಾಂಕ್ ಮಿಜಾಯು ಖಾ ನವರನ್.	354	474	ಪಟಿಗೀ	...	35	5	19	35	5	19	ರಸ್ತೆ	ಪಟಿಗೀ	ಬಟ್ಟಲಿಂ ವೀರ ಯ್ಯುನ ಮನೆ	ರಸ್ತೆ
			3. ಶಾಮಣ್ಣ	353	476	ಪಟಿಗೀ	...	48	3	16	48	3	16	ಪಟಿಗೀ	ಪಟಿಗೀ	ಕೃಷ್ಣಪ್ಪ ಮುಂಡಿಗೆ ರಾಜ್ ಮನೆ.	ಪಟಿಗೀ
			†4. ಲಕ್ಷ್ಮೀ ನರಸಪ್ಪ	502	642	ಪಟಿಗೀ	...	23	15	38	23	15	38 ಪ್ಲಿಂಥ್ 9 ಗಜ ಸಮಾತ್ರ	ಪಟಿಗೀ	ಪಟಿಗೀ	ಸ್ವತ್ತ ಮನೆ	ಪಟಿಗೀ
			5. ನಂಜಪ್ಪನವ್ವಣ್ಣಿ	...	...	ಪಟಿಗೀ	...	35	$\frac{0+5+4}{3}$	$11\frac{2}{3}$	35	$\frac{0+5+4}{3}$	$11\frac{2}{3}$	ಪಟಿಗೀ	ಪಟಿಗೀ	ಪಟಿಗೀ	ಸ್ವಂತ ಮನೆ
						ನಂಜಂಡನ ಗೋವಿಂ.		36	...	12	36	...	12				

ಸೂಚನೆ—* ಈ ಪ್ಲಿಂಥ್ 48 ಚದರ ಗಜ ವಿಸ್ತೀರ್ಣ ತಗದುಕೊಂಡಿರುತ್ತೆ. ಈಗ ತೆಗದುಕೊಳ್ಳಬೇಕಾದದ್ದು 32 ಚದರ ಗಜ.

† ಹಿಂದೆಯೇ 29 ಚದರ ಗಜ ತೆಗದುಕೊಂಡಿದೆ.

ತಾರೀಖು 22ನೆ ಮೇ 1909.

ನಂ. 11684—ಮ್ಯೂ. 341-06-151, ಆನೆಕಲ್ ಟವನನ್ನು ಫಲಾನಾಸರಹದ್ದುಗಳ್ಳ ಮುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿ ಇದೆ ಎಂಬದಾಗಿ ಬಂದು ಪ್ರಕಟನೆಯನ್ನು 1906ನೆ ಇಸವಿಯ 7ನೆ ನಂಬರ್ ಮ್ಯುನಿಸಿಪಲ್ ರೆಗ್ಯುಲೇಷನಿನ 8ನೆ ಪ್ರಕರಣದ ವೇರೆಗೆ 1909ನೆ ಇಸವಿಯ ಜನವರಿ 8ನೆ ತಾರೀಖಿನಲ್ಲಿ 1909ನೆ ಇಸವಿಯ ಜನವರಿ 14ನೆ ತಾರೀಖಿನ ಗೆಜೆಟ್ಟಿನ 11ನೆ ಭಾಗದಲ್ಲಿ ಇಂಗ್ಲಿಷ್ ಗೆಜೆಟ್ಟಿನ 50ನೆ ಪುಟದಲ್ಲಿಯೂ, ಕನ್ನಡ ಗೆಜೆಟ್ಟಿನ 16ನೆ ಪುಟದಲ್ಲಿಯೂ ಪ್ರಾಯಿಷ್ಮಾಡಿರುವುದಲ್ಲದೆ ಸದರೀ ಆನೆಕಲ್ ಟವನಿನ ಬಹಿರಂಗವಾದ ಸ್ಥಳಗಳಲ್ಲಿಯೂ ಚಿಕಟಾಯಿಸಿದುದರಿಂದಲೂ, ಸದರಿ ಉದ್ದೇಶಕ್ಕೆ ಯಾವ ಆಕ್ಷೇಪಣೆಯೂ ಬಂದಿರುವುದಿಲ್ಲವಾದುದರಿಂದಲೂ, ಮೈಸೂರು ಶ್ರೀಮದ್ ಮಹಾರಾಜಾ ಸಾಹೇಬ್ಬರ್ದ್ದೂರ್ರವರ ಸರ್ಕಾರದವರು ಸದರಿ ರೆಗ್ಯುಲೇಷನಿನ 4 (1)ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸದರೀ ಆನೆಕಲ್ ಟವನನ್ನು ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಿ ಸದರಿ ಮ್ಯುನಿಸಿಪಾಲಿಟಿಯ ಸರಹದ್ದು 1909ನೆ ಇಸವಿಯ ಜುಲೈ 1ನೆ ತಾರೀಖಿನ ದಿನವೂ ಆ ಅನಂತರವೂ ಮುಂದೆ ನವೂದಿಸಿರುವ ಪ್ರಕಾರ ಇರಬೇಕೆಂದು ಅಪ್ಪಣೆ ದಯಪಾಲಿಸಿರುತ್ತಾರೆ :—

I. ಆನೆಕಲ್ ಟವ್ನ ಎಲ್ಲೆಯು ಸದರಿ ಗ್ರಾಮದ ಸರ್ವೆ 517ನೆ ನಂಬರಿನ ಈಶಾನ್ಯ ಮೂಲೆಯಲ್ಲಿರುವ 1ನೆ ನಂಬರ್ ಗಡಿ ಕಲ್ಲಿನಿಂದ ಪ್ರಾರಂಭಿಸಿ ಸರ್ವೆ 523, 524ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೋಗುತ್ತದೆ. ಅಲ್ಲಿಂದ ದೊಡ್ಡಕೆರೆಬಾಗಲು ರಸ್ತೆಯನ್ನು ಹಾದು ಸರ್ವೆ 525, 526ನೆ ನಂಬರುಗಳ ಪಶ್ಚಿಮ ಎಲ್ಲೆಯ ಮಾರ್ಗವಾಗಿ ಹೊರಟು ಸರ್ವೆ 526ನೆ ನಂಬರು ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿ ಸರ್ವೆ 548ನೆ ನಂಬರಿನ ಮುಖಾಂತರ ಸದರಿ ನಂಬರಿನ ಹೊಲಗೆರೆಯನ್ನು ಮಿಕ್ಕ ಭಾಗದಿಂದ ಪ್ರತ್ಯೇಕಿಸಿಕೊಂಡು ಅಲ್ಲಿಂದ ಸರ್ವೆ 546, 547, 542ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ರೆವಿನ್ಯೂ ಸರ್ವೆ 549ನೆ ನಂಬರಿನ ಪಶ್ಚಿಮ ಎಲ್ಲೆಯನ್ನು ಸಂಧಿಸಿ ಅದೇ 549ನೆ ನಂಬರು ಪಶ್ಚಿಮ ಮತ್ತು ದಕ್ಷಿಣ ಎಲ್ಲೆ ಮಾರ್ಗವಾಗಿ ಅಲ್ಲಿಂದ ಬೆಂಗಳೂರು ರಸ್ತೆಯನ್ನು ಹಾದು ಸರ್ವೆ ನಂಬರು 1, 2, 562, 563, 564, 565, 567, 77 ಈ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ರೆವಿನ್ಯೂ ಸರ್ವೆ 568, 80, 81ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ತಿರುಗಿ ಸರ್ವೆ 81ನೆ ನಂಬರು ದಕ್ಷಿಣ ಮತ್ತು ಪೂರ್ವ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 82, 85ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ಅಲ್ಲಿಂದ ಸರ್ವೆ 85, 86ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 87ನೆ ನಂಬರಿನ ನೈರುತ್ಯ ಮೂಲೆಯಲ್ಲಿರುವ ದಕ್ಷಿಣ ಎಲ್ಲೆಯನ್ನು ಸೇರಿ ಅಲ್ಲಿಂದ ತಿರುಗಿ 87ನೆ ಸರ್ವೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು 88ನೆ ನಂಬರಿನ ಈಶಾನ್ಯ ಮೂಲೆಯಲ್ಲಿರುವ 2ನೆ ನಂಬರು ಗಡಿ ಕಲ್ಲನ್ನು ಸೇರುತ್ತದೆ.

II. ಇಲ್ಲಿಂದ ಎಲ್ಲೆಯು ದಕ್ಷಿಣಕ್ಕೆ ತಿರುಗಿ ಸರ್ವೆ 91ನೆ ನಂಬರು ಪಶ್ಚಿಮಗಡಿ ಮಾರ್ಗವಾಗಿ ಹೊರಟು ಸಜ್ಜಾಪುರದ ರಸ್ತೆಯನ್ನು ಹಾದು ಸರ್ವೆ 111ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಬೆದರಗೆರೆಗೆ ಹೋಗುವ ರಸ್ತೆಯನ್ನು ದಾಟಿ ಸರ್ವೆ 115ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರಿ ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಸದರಿ ನಂಬರಿನ ಉತ್ತರ ಮತ್ತು ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗಿ ಅಲ್ಲಿಂದ ಅದರ ದಕ್ಷಿಣ ಎಲ್ಲೆಯನ್ನು ಸ್ವಲ್ಪದೂರ ಅನುಸರಿಸಿ ಸರ್ವೆ 127ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 127, 125, 124, 142, 143, 144, 145, 146, 202 ಮತ್ತು 199 ಈ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು 197ನೆ ನಂಬರಿನ ಪಶ್ಚಿಮ, ಉತ್ತರ, ಪೂರ್ವ ಎಲ್ಲೆಗಳನ್ನು ಬಳಸಿಕೊಂಡು 196ನೆ ನಂಬರಿನ ಉತ್ತರ ಮತ್ತು ಪೂರ್ವ ಎಲ್ಲೆಗಳ ಮಾರ್ಗವಾಗಿ ಬಂದು ಸದರಿ ನಂಬರಿನ ಆಗ್ನೇಯ ಮೂಲೆಯನ್ನು ಸಂಧಿಸುತ್ತದೆ.

III. ಇಲ್ಲಿಂದ ಎಲ್ಲೆಯು ರೆವಿನ್ಯೂ ಸರ್ವೆ 196, 192ನೆ ನಂಬರುಗಳ ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ಉತ್ತರ ದಿಕ್ಕಿಗೆ ತಿರುಗಿ ರೆವಿನ್ಯೂ ಸರ್ವೆ 192ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಸರ್ವೆ 191ನೆ ನಂಬರಿನ ಈಶಾನ್ಯ ಮೂಲೆಗೆ ಸೇರುತ್ತದೆ. ಇಲ್ಲಿಂದ ಎಲ್ಲೆಯು ಪಶ್ಚಿಮಕ್ಕೆ ತಿರುಗಿ ಸರ್ವೆ 191, 200, 201, 203, 141 ಈ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಮತ್ತಿಕೆರೆ ರಸ್ತೆಯನ್ನು ಹಾದು ರೆವಿನ್ಯೂ ಸರ್ವೆ 138ನೆ ನಂಬರಿನ ಆಗ್ನೇಯ ಮೂಲೆಯಲ್ಲಿರುವ 3ನೆ ನಂಬರು ಗಡಿ ಕಲ್ಲನ್ನು ಸೇರುತ್ತದೆ. ಇಲ್ಲಿಂದ ಎಲ್ಲೆಯು ಸರ್ವೆ 139ನೆ ನಂಬರಿನ ಉತ್ತರ ಮತ್ತು ಪಶ್ಚಿಮ ಎಲ್ಲೆಗಳ ಮಾರ್ಗವಾಗಿ ಹೊರಟು 137, 135, 134ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 251ನೆ ನಂಬರು ಚಿಕ ಕೆರೆಯ ಪೂರ್ವ ದಕ್ಷಿಣ ಮತ್ತು ಪಶ್ಚಿಮ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 258, 257, 256, 561, 284, 889, 509 ಮತ್ತು 510ನೆ ನಂಬರುಗಳ ಉತ್ತರ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 510ನೆ ನಂಬರು ವಾಯವ್ಯ ಮೂಲೆಯಲ್ಲಿರುವ 4ನೆ ನಂಬರು ಗಡಿ ಕಲ್ಲನ್ನು ಸೇರುತ್ತದೆ.

IV. ಈ ಗಡಿ ಕಲ್ಲಿನಿಂದ ಎಲ್ಲೆಯು ಉತ್ತರಾಭಿಮುಖವಾಗಿ ಹೊರಟು ಸರ್ವೆ 513, 514, 515ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೊರಟು ಗುಮಳಾಪುರದ ರಸ್ತೆಯನ್ನು ಹಾದು ಸರ್ವೆ 516ನೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿ ಸರ್ವೆ 516, 517ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ 1ನೆ ನಂಬರು ಗಡಿ ಕಲ್ಲನ್ನು ಸೇರುತ್ತದೆ.

ಇದರಿಂದ ಈ ಕೆಳಗೆ ಕಂಡ ಸರ್ವೆ ನಂಬರುಗಳು ಆನೆಕಲ್ ಮ್ಯುನಿಸಿಪಾಲಿಟಿಯ ಸರಹದ್ದಿನಲ್ಲಿ ಸೇರಿರುತ್ತವೆ :— ರೆವಿನ್ಯೂ ಸರ್ವೆ 548ನೆ ನಂಬರು ಹೊಲಗೆರೆಗೆ ತೆಗದುಕೊಂಡು ಇರುವಷ್ಟು ಭಾಗ ; ರೆವಿನ್ಯೂ ಸರ್ವೆ ನಂಬರುಗಳು 550, 569, 89, 88, 90, 112, 128, 129, 130, 131, 132, 133, 138, 192, 196, 197, 252, 253, 254, 255, 553, 554, 555, 556, 557, 558, 559, 560 ಮತ್ತು 251 (ಚಿಕ್ಕೆರೆ).

ತಾರೀಖು 19ನೆ ಮೇ 1909.

ನಂ. ರೆ. 9666—ಟ್ರೈ. ರೆ. 20-03-31, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೆಲಸ ಮಾಡುತ್ತಿರುವ ಅಸಿಸ್ಟೆಂಟ್ ಕಮಿಷನರ್ ಮೀ|| ಎಸ್. ಪಿ. ರಾಜಗೋಪಾಲಾಚಾರಿ, ಬಿ. ಎ., ಬಿ. ಎಲ್. ರವರನ್ನು ಹಂಗಾಮಿಯಾಗಿ ಮಳವಳ್ಳಿ ತಾಲ್ಲೂಕಿನ ಛಾರ್ಜಿನಲ್ಲಿಟ್ಟು ಮೈಸೂರನ್ನು ಅವರಿಗೆ ಈಸಬೆಯನ್ನಾಗಿ ಮೊಕರರ್ರಾಡೆತಕ್ಕದ್ದು.

ಹುಕುಂ ಖಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.